ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಕೊಡಗು ಜಿಲ್ಲೆ,
ಮಡಿಕೇರಿ, ದಿನಾಂಕ:25–05–2019

# ಪತ್ರಿಕಾ ಪ್ರಕಟಣೆ

ಕಳೆದ ವರ್ಷ ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದಿಂದ ಮಾನವ ಜೀವಹಾನಿ, ಜಾನುವಾರು ಹಾನಿ, ಬೆಳೆಹಾನಿ ಹಾಗೂ ಮನೆಗಳ ಹಾನಿ ಉಂಟಾದ ಬಾಬ್ತು, ವಿವಿಧ ಹಾನಿಗಳ ಸಂಬಂಧ ಈ ಕೆಳಕಂಡಂತೆ ಪರಿಹಾರ ಪಾವತಿ ಮಾಡಲಾಗಿರುತ್ತದೆ.

**2018–19ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದಿಂದ ಸಂತ್ರಸ್ಥರಾದವರಿಗೆ ಸರ್ಕಾರದಿಂದ ವಿವಿಧ ಪರಿಹಾರಗಳನ್ನು ಪಾವತಿ ಮಾಡಿರುವ ವಿವರ**

| ಕ್ರ.ಸಂ. | ಹಾನಿಯ ವಿವರ | ಪರಿಹಾರ ಪಾವತಿ ವಿವರ | ಯೋಜನೆ/ಅನುದಾನ | ಒಟ್ಟು ಪ್ರಕರಣಗಳು | ಪರಿಹಾರ ಪಾವತಿಸಿದ ಒಟ್ಟು ಮೊತ್ತ (ರೂ.ಕೋಟಿಗಳಲ್ಲಿ) | ಪಾವತಿ ವಿಧಾನ |
|---|---|---|---|---|---|---|
| 1 | ಮಾನವ ಜೀವ ಹಾನಿ | ಅನುಕಂಪ ಭತ್ಯೆ | NDRF/SDRF/ CM Relief Fund PM Relief Fund/ | 21 | 1.370 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 2 | ಜಾನುವಾರು ಪ್ರಾಣ ಹಾನಿ | ಜಾನುವಾರು ಪ್ರಾಣ ಹಾನಿ | NDRF/SDRF | 127 | 0.282 | ಚೆಕ್/ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 3 | ದಿನಬಳಕೆಯ ವಸ್ತು ಹಾನಿ | ಅನುಕಂಪ ಭತ್ಯೆ (ಪ್ರತೀ ಕುಟುಂಬಕ್ಕೆ 3,800/– ರಂತೆ) | NDRF/SDRF | 4400 | 1.672 | ಚೆಕ್/ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |

| | | | | | | |
|---|---|---|---|---|---|---|
| 4 | ವಾಸದ ಮನೆ ಹಾನಿ | ಪರಿಹಾರ ಮೊತ್ತ | NDRF/SDRF | 4254 | 15.087 | ಚೆಕ್/ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 5 | ಮನೆಹಾನಿ | ಅನುಕಂಪ ಭತ್ಯೆ (ಪ್ರತೀ ಕುಟುಂಬಕ್ಕೆ 50,000/- ರಂತೆ) | CM Relief Fund | 1021 | 5.105 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 6 | ವಾಸದ ಮನೆ ಹಾನಿ | ಮನೆ ಬಾಡಿಗೆ (ನವೆಂಬರ್-2018 ರ ಮಾಹೆಯ ಬಾಡಿಗೆ ತಲಾ ರೂ.10,000/- ದಂತೆ) | CM Relief Fund | 480 | 0.480 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 7 | ವಾಸದ ಮನೆ ಹಾನಿ | ಮನೆ ಬಾಡಿಗೆ (ಡಿಸೆಂಬರ್-2018 ರ ಮಾಹೆಯಿಂದ ಏಪ್ರಿಲ್-2019 ರವರೆಗೆ- ಮಾಹೆಯಾನ ತಲಾ ರೂ.10,000/- ದಂತೆ 5 ತಿಂಗಳಿಗೆ) | CM Relief Fund | 415 | 2.075 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 8 | ವಾಸದ ಮನೆ ಹಾನಿ | ಸ್ವಂತ ನಿವೇಶನದಲ್ಲಿ ಮನೆ ಮಾಡಿಕೊಳ್ಳಲು ಇಚ್ಛಿಸಿದ ಸಂತ್ರಸ್ಥರಿಗೆ ಮೊದಲನೇ ಕಂತಿನ ಹಣ (ತಲಾ ರೂ.2.00 ಲಕ್ಷದಂತೆ) | CM Relief Fund | 54 | 1.080 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 9 | ಬೆಳೆಹಾನಿ | ಪ್ರವಾಹದಿಂದ ಉಂಟಾದ ಬೆಳೆಹಾನಿ (39871.63 ಹೆಕ್ಟೇರ್) | NDRF/SDRF | 32198 | 38.050 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |

| | | | | | | |
|---|---|---|---|---|---|---|
| 10 | ಬೆಳೆಹಾನಿ | ಭೂ ಕುಸಿತದಿಂದ ಉಂಟಾದ ಬೆಳೆಹಾನಿ (993.10 ಹೆಕ್ಟೇರ್) | NDRF/SDRF | 1185 | 2.970 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| 11 | ಬೆಳೆಹಾನಿ | ಮಣ್ಣು ತುಂಬಿ ಉಂಟಾದ ಬೆಳೆಹಾನಿ (225.41 ಹೆಕ್ಟೇರ್) | NDRF/SDRF | 351 | 0.209 | ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ |
| | | **ಒಟ್ಟು** | | **44506** | **68.38** | |

ಮೇಲ್ಕಂಡ ಕೋಷ್ಠಕದ ಕ್ರ.ಸಂ.1 ರಿಂದ 11 ರಲ್ಲಿ ನಮೂದಿಸಿರುವಂತೆ, ವೈಯಕ್ತಿಕ ಫಲಾನುಭವಿಗಳಿಗೆ 44,506 ಪ್ರಕರಣಗಳಲ್ಲಿ ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್, ಮುಖ್ಯಮಂತ್ರಿಗಳ ಪರಿಹಾರ ನಿಧಿ ಮತ್ತು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗಳಿಂದ ಈವರೆಗೆ ರೂ.68.38 ಕೋಟಿಗಳ ಪರಿಹಾರದ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ.

ಮೇಲ್ಕಂಡ ಕೋಷ್ಠಕದ ಕ್ರ.ಸಂ. 2 ರಿಂದ 4 ನ್ನು ಹೊರತು ಪಡಿಸಿ ಉಳಿದ ಎಲ್ಲಾ ಫಲಾನುಭವಿವಾರು ವಿವರಗಳನ್ನು ಕೊಡಗು ಜಿಲ್ಲಾ ವೆಬ್‌ಸೈಟ್ https://kodagu.nic.in ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಲಾಗಿದೆ. ಕ್ರ.ಸಂ.2 ರಿಂದ 4 ರ ಮಾಹಿತಿಯನ್ನು ಮೂರು ದಿನದೊಳಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ವಹಿಸಲಾಗುವುದು. ಸದರಿ ಪರಿಹಾರದ ಸಂಬಂಧಿತ ವಿಚಾರಗಳಲ್ಲಿ ಯಾವುದೇ ತಕರಾರುಗಳಿದ್ದಲ್ಲಿ ಸಾರ್ವಜನಿಕರು ದಿನಾಂಕ:28-05-2019 ಮತ್ತು 29-05-2019 ರಂದು ಜಿಲ್ಲಾ ಕಚೇರಿಗಳ ಸಂಕೀರ್ಣದಲ್ಲಿರುವ ಕೊಠಡಿ ಸಂ.18, ಎರಡನೇ ಮಹಡಿ, ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ನಡೆಯುತ್ತಿರುವ ಪರಿಹಾರ ಅದಾಲತ್‌ನಲ್ಲಿ ಬಂದು ತಮ್ಮ ಗೊಂದಲಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ.

ಸಹಿ/-

**ಜಿಲ್ಲಾಧಿಕಾರಿ,**
**ಕೊಡಗು ಜಿಲ್ಲೆ, ಮಡಿಕೇರಿ.**